[redacted]



# ಶ್ರೀ ರೇವಯ್ಯಜ್ಜನವರ ಗ್ರಂಥ ಓದಿ ಜೀವನವನ್ನು ಹಸನಮಾಡಿಕೊಳ್ಳಿ

## ಶ್ರೀ ರೇವಯ್ಯ ಅಜ್ಜನವರ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಶ್ರೀ ಬಸವಾನಂದ ಭಾರತಿ ಸ್ವಾಮಿಗಳು ಅಭಿಮತ



ರಾಮದುರ್ಗ: ಇಂದಿನ ಯುವ ಜನಾಂಗ ಗುಟಕಾ ಸಿಗರೇಟನಂತಹ ಧೂಮಪಾನ ಮಾಡಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿರುವುದು ವಿಷಾಧನೀಯ ಸಂಗತಿ. ದೂಮಪಾನ ವ್ಯಸನವನ್ನು ಬಿಟ್ಟು ಅಧ್ಯಾತ್ಮದ ಕಡೆ ಒಲವು ತೋರಿ ಶ್ರೀ ರೇವಯ್ಯಜ್ಜನವರ ಮಹಾತ್ಮರ ಗ್ರಂಥವನ್ನು ಓದಿ ಜೀವನವನ್ನು ಹಸನಮಾಡಿಕೊಳ್ಳಬೇಕೆಂದು ಸುಕ್ಷೇತ್ರ ಕುಳ್ಳೂರದ ಶ್ರೀ ಶಿವಯೋಗೇಶ್ವರ ಸಂಸ್ಥಾನ ಕಲ್ಮಠದ ಸದ್ಗುರು ಪೂಜ್ಯ ಶ್ರೀ ಬಸವಾನಂದ ಭಾರತಿ ಸ್ವಾಮಿಗಳು ಹೇಳಿದರು.

ಅವರು ರವಿವಾರ ದಿ. 14 ರಂದು ರಾಮದುರ್ಗ ತಾಲೂಕಿನ ಓಬಳಾಪೂರ ಗ್ರಾಮದಲ್ಲಿ ಸದ್ಗುರು ಶ್ರೀ ರೇವಯ್ಯ ಶಿವಯೋಗಿಗಳವರ ಜಾತ್ರಾ ಮಹೋತ್ಸವದಂದು ಸಾಹಿತಿಗಳಾದ ಶ್ರೀನಿವಾಸಗೌಡ ಬಾ ಪಾಟೀಲ ರವರು ರಚಿಸಿದ "ಕಾಯಕಯೋಗಿ ಸದ್ಗುರು ಶ್ರೀ ರೇವಯ್ಯ ಮಹಾಸ್ವಾಮಿಗಳು" ದ್ವಿತೀಯ ಮುದ್ರಣ ಕೃತಿಯನ್ನು ಕನ್ನಡ ಧ್ವಜದೊಂದಿಗೆ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಎರಡುತರ ಗ್ರಂಥ ಇರುತ್ತವೆ ರೇವಯ್ಯಜ್ಜನವರ ಗ್ರಂಥವನ್ನು ಕೈ ತೊಳೆದುಕೊಂಡು ಮುಟ್ಟಬೇಕು, ಕೆಲವು ಗ್ರಂಥ ಓದಿದ ಮೇಲೆ ಕೈ ತೊಳೆದುಕೊಳ್ಳಬೇಕು ಆದರೆ ರೇವಯ್ಯಜ್ಜನವರ ಗ್ರಂಥವನ್ನು ಓದುವದರಿಂದ ಜೀವನ ಪಾವನವಾಗುತ್ತದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಸಾಮೂಹಿಕ ವಿವಾಹದಲ್ಲಿ ಪಾಲ್ಗೊಂಡ ನವ ವಧುವರರಿಗೆ ಆಶೀರ್ವದಿಸಿ ಶ್ರೀಗಳು ಆಶೀರ್ವಚನ ನೀಡಿದರು. ಕೊಟಬಾಗಿಯ ಶ್ರೀ ಸಿದ್ಧಾರೊಡ ಆಶ್ರಮದ ಪೂಜ್ಯ ಶ್ರೀ ಪ್ರಭುದೇವರು ,ಹೊಸಕೋಟಿಯ ಶ್ರೀ ರೇವಯ್ಯಜ್ಜನವರ ಮಠದ ಪೂಜ್ಯ ಶ್ರೀ ಅಭಿನವ ರೇವಯ್ಯ ಸ್ವಾಮಿಗಳು, ಕೆ.ಕೆ. ಕೊಪ್ಪದ ಶ್ರೀ ಶಿವಯೋಗೇಶ್ವರ ಮಠದ ಪೂಜ್ಯ ಶ್ರೀ ಸಿದ್ದಪ್ರಭು ಶಿವಾಚಾರ್ಯರು ಸ್ವಾಮಿಗಳು ಸಾನಿಧ್ಯವಹಿಸಿದ್ದರು. ಈ ವೇಳೆಯಲ್ಲಿ ಗ್ರಾಮದ ಹಿರಿಯರಿಂದ ಶ್ರೀಗಳನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಸಾಹಿತ್ಯ ಸೇವೆಗೆ ಬೆಂಬಲಿಸಿದ ಮಹನಿಯರನ್ನು ಸತ್ಕರಿಸಲಾಯಿತು. ಗ್ರಾಮದ ಹಿರಿಯರು, ವಿವಿಧ ಗ್ರಾಮಗಳಿಂದ ಆಗಮಿಸಿದ ಸದ್ಭಕ್ತರು ಉಪಸ್ಥಿತರಿದ್ದರು.

# ರೋಟರಿ ಸದಸ್ಯರಿಂದ ಜೀವನಜ್ಯೋತಿ ವೃದ್ಧಾಶ್ರಮಕ್ಕೆ ಭೇಟಿ



ಗದಗ: ರೋಟರಿ ಸಂಸ್ಥೆ ಗದಗ ಬೆಟಗೇರಿಯ ಸದಸ್ಯರು ವಿಶ್ವ ಆರೋಗ್ಯ ದಿನದಂದು ಜೀವನ ಜ್ಯೋತಿ ಶಿವರತ್ನ ವೃದ್ಧಾಶ್ರಮಕ್ಕೆ ಭೇಟಿ ನೀಡಿದರು. ಡಾ. ಕಮಲಾಕ್ಷಿ ಅಂಗಡಿಯವರು ಹಿರಿಯರು ತಮ್ಮ ಆರೋಗ್ಯವನ್ನು ಯಾವ ರೀತಿ ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿ ಪ್ರತಿಯೊಬ್ಬರ ಆರೋಗ್ಯ ಕುರಿತು ಮಾಹಿತಿ ಪಡೆದು ಯೋಗ್ಯ ಸಲಹೆಯನ್ನು ನೀಡಿದರು. ಪ್ರತಿಯೊಬ್ಬರು ಪ್ರತಿದಿನ ಸಾಧ್ಯವಾದರೆ ಎರಡು ಸಾರಿ ಸ್ನಾನ ಮಾಡಿ ದೇಹವನ್ನು ಶುಚಿಯಾಗಿಟ್ಟುಕೊಳ್ಳಬೇಕು ಹಾಗೂ ಬೇಸಿಗೆ ಕಾಲವಾದ್ದರಿಂದ ಸಾಕಷ್ಟು ನೀರು ಹಾಗೂ ತಾಜಾ ಹಣ್ಣುಗಳನ್ನು ತಿನ್ನಬೇಕೆಂದರು. ಈ ಸಂಧರ್ಬದಲ್ಲಿ ವೃದ್ಧಾಶ್ರಮದಲ್ಲಿರುವ ಹಿರಿಯರಿಗೆ ಸದಸ್ಯರು ಹಣ್ಣುಗಳನ್ನು ಹಂಚಿದರು. ಜೀವನ ಜ್ಯೋತಿ ಶಿವರತ್ನ ವೃದ್ಧಾಶ್ರಮದ ಮೇಲ್ವಿಚಾರಕ 'ರಾದ ಶ್ರೀಮತಿ. ಮಂಜುಳಾ ಲಕ್ಕುಂಡಿಯವರು ಸರ್ವರನ್ನು ಸ್ವಾಗತಿದರು. ಸಂಸ್ಥೆಯ ಅಧ್ಯಕ್ಷರಾದ ರೊ. ಚಂದ್ರಮೌಳಿ, ಕಾರ್ಯದರ್ಶಿಗಳಾದ ವೀಣಾ ತಿರ್ಲಾಪೂರ, ಸದಸ್ಯರಾದ ರೊ. ಬಾಲಕೃಷ್ಣ ಪಿ ಕಾಮತ್ ರೊ. ವಿಶ್ವನಾಥ ಯಲಮಲಿ, ರೊ. ಶಿವಾಚಾರ್ಯ ಹೊಸಳ್ಳಿಮಠ, ರೊ. ಶ್ರೀಧರ ಸುಲ್ತಾನಪೂರ ಮುಂತಾದವರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಕಬಡ್ಡಿ ಮಹಿಳಾ ಕ್ರೀಡಾಪಟುಗಳಿಂದ ಮತದಾನ ಜಾಗೃತಿ



ಗದಗ ಏಪ್ರಿಲ್ : ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕು ಸ್ವೀಪ್ ಸಮಿತಿಯಿಂದ ನಡೆದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದ ಮಹಿಳಾ ಕಬ್ಬಡಿ ಕ್ರೀಡಾಪಟುಗಳು ಭಾಗವಹಿಸಿ ನರೇಗಾ ಕೂಲಿಕಾರರಿಗೆ ಮತದಾನ ಜಾಗೃತಿ ಮೂಡಿಸಿದರು. ಚುನಾವಣೆ ರಾಯಭಾರಿಗಳಂತೆ ಮತದಾನ ಜಾಗೃತಿ ಕಾರ್ಯದಲ್ಲಿ ಕಲಕೇರಿ ಗ್ರಾಮದ ರಾಷ್ಟ್ರಮಟ್ಟದ ಕಬ್ಬಡಿ ಮಹಿಳಾ ಕ್ರೀಡಾಪಟುಗಳಾದ ಕುಮಾರಿ ಪ್ರೇಮಾ ಪಾಟೀಲ್, ನಿರ್ಮಲಾ ಪರಮೇಶ್ವರ್ ಮತ್ತು ಮೇಘಾ ಮಳ್ಳಸಿದ್ಧನವರ ಅವರು ಭಾಗವಹಿಸಿ ಕೂಲಿಕಾರರಿಗೆ ಮತದಾನ ಜಾಗೃತಿ ಬಗ್ಗೆ ತಿಳಿ ಹೇಳಿದರು.ಕಲಕೇರಿ ಗ್ರಾಮದ ಮೂವರು ಕ್ರೀಡಾಪಟುಗಳು ನರೇಗಾ ಕಾಮಗಾರಿ ಸ್ಥಳಕ್ಕೆ ಸ್ವಯಂಪ್ರೇರಿತರಾಗಿ ಬರುವುದರ ಮೂಲಕ ಸ್ಥಳದಲ್ಲಿದ್ದ 500 ಕ್ಕೂ ಅಧಿಕ ಕೂಲಿಕಾರರಿಗೆ ಕಡ್ಡಾಯ ಮತದಾನ ಕುರಿತು ಅರಿವು ಮೂಡಿಸಿದರು. ಈ ವೇಳೆ ರಾಷ್ಟ್ರಮಟ್ಟದ ಅಂಡರ್ 20 ಜ್ಯೂನಿಯರ್ ಕಬಡ್ಡಿ ಕ್ರೀಡಾಪಟು ಕುಮಾರಿ ಪ್ರೇಮಾ ಪಾಟೀಲ್ ಮಾತನಾಡಿ, ಮೊದಲ ಬಾರಿಗೆ ನಾನು ಲೋಕಸಭೆ ಚುನಾವಣೆಯಲ್ಲಿ ಈ ಭಾರಿ ಮತದಾನ ಮಾಡುತ್ತಿದ್ದೇನೆ. ಮತದಾನ ಮಾಡುತ್ತಿರುವುದು ಖುಷಿಯ ಸಂಗತಿ ಎನಿಸಿದೆ. ಯಾವುದೇ ಮತದಾರರು ಜಾತಿ, ಆಮಿಷಕ್ಕೆ ಒಳಗಾಗದೇ ಸ್ವಂತ ಬುದ್ದಿಯಿಂದ ಆಲೋಚಿಸಿ ಯೋಗ್ಯ ವ್ಯಕ್ತಿಯನ್ನು ಆ03?ಕು ಮಾಡಬೇಕು. ಕೂಲಿಕಾರರು ಮೇ–07 ರಂದು ಯಾವುದೇ ಕೆಲಸಕ್ಕೆ ತೆರಳದೇ ಅಂದು ಮತದಾನ ಮಾಡಿ ಸಂತಸಪಡಬೇಕೆಂದು ಹೇಳಿದರು. ರಾಷ್ಟ್ರಮಟ್ಟದ ಅಂಡರ್ 19 ಸ್ಕೂಲ್ ಗೇಮ್ ಕಬಡ್ಡಿ ಕ್ರೀಡಾಪಟು ಕುಮಾರಿ ನಿರ್ಮಲಾ ಪರಮೇಶ್ವರ ಮಾತನಾಡಿ, ನಮ್ಮೂರಲ್ಲೇ ಎಲ್ಲ ಕೂಲಿಕಾರರಿಗೆ ಪಂಚಾಯತ ವತಿಯಿಂದ ಕೆಲಸ ನೀಡುತ್ತಿದ್ದಾರೆ. ಬೇಸಿಗೆ ಇದೆ ಹೊಲದಲ್ಲಿ ಕೆಲಸ ಇಲ್ಲ ಎಂಬ ಚಿಂತೆ ದೂರವಾಗಿದೆ. ಹೀಗಾಗಿ ಬೇಸಿಗೆ ಮುಗಿಯುವರೆಗೂ ನರೇಗಾ ಕಾಮಗಾರಿ ಕೆಲಸ ಮಾಡಿ ಮೇ–07 ರಂದು ಕಡ್ಡಾಯವಾಗಿ ಮತದಾನ ಮಾಡೋಣ ಎಂದರು.

ಕ್ರೀಡಾಪಟು ಮೇಘಾ ಮಳ್ಳಸಿದ್ಧನವರ ಅವರು ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲ ಕೂಲಿಕಾರರಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸೋಮಶೇಖರ್ ಬಿರಾದರ್, ವಿ.ಆರ್.ರಾಯನಗೌಡರ, ಹುಣಶೀಕಟ್ಟಿ ಗ್ರಾಮ ಪಂಚಾಯತ ಅಧಿಕಾರಿಗಳು, ಸುರೇಶ್ ಬಾಳಿಕಾಯಿ ಐಇಸಿ ಸಂಯೋಜಕರು, ಬಸವರಾಜ ಚಿಮ್ಮನಕಟ್ಟಿ ಬಿಎಫ್‌ಟಿ, ನರೇಗಾ ಸಿಬ್ಬಂದಿ ಮತ್ತು ಹುಣಶಿಕಟ್ಟಿ ಸಿಬ್ಬಂದಿ ವರ್ಗ ಹಾಜರಿದ್ದರು.

# ಬಿಜೆಪಿ ದೇಶದ ಹಿತಕ್ಕಾಗಿ ರಾಜಕಾರಣ ಮಾಡುವ ಏಕೈಕ ಪಕ್ಷ– ಡಾ.ಬಸವರಾಜ



ಕೊಪ್ಪಳ: ದೇಶ ಮೊದಲು ಎಂಬ ಚಿಂತನೆಯಲ್ಲಿ ಶುರುವಾದ ಬಿಜೆಪಿ ಪಕ್ಷವು ನಿರಂತರ ಹೋರಾಟ, ಸಂಘರ್ಷ ಮತ್ತು ಪಕ್ಷದ ಅನೇಕ ಹಿರಿಯ ನಾಯಕರ ಬಲಿದಾನದಿಂದಾಗಿ ಇಂದು ವಿಶ್ವದ ಅತಿದೊಡ್ಡ ಪಕ್ಷವಾಗಿ ನಿಂತಿದೆ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಹೇಳಿದರು.

ನಗರದ ಮಹೇಶ್ವರ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ "ಪಂಡಿತ ದೀನ ದಯಾಳ ಉಪಾಧ್ಯಾಯ" ಮಹಾಶಕ್ತಿ ಕೇಂದ್ರದ ಚುನಾವಣಾ ಸಭೆಯಲ್ಲಿ ಮಾತನಾಡಿದ ಅವರು, ದೇಶದ ಹಿತಕ್ಕಾಗಿ ರಾಜಕಾರಣ ಮಾಡುವ ಏಕೈಕ ಪಕ್ಷ ಬಿಜೆಪಿ. ದೇಶದ ಅಭಿವೃದ್ಧಿಗಾಗಿ ರಜೆ ಪಡೆಯದೆ ಕೆಲಸ ಮಾಡುತ್ತಿರುವ ಪ್ರಧಾನ ನರೇಂದ್ರ ಮೋದಿ ಅವರು ಮತ್ತೊಮ್ಮೆ ದೇಶದ ಪ್ರಧಾನಿಯಾಗುವ ನಿಟ್ಟಿನಲ್ಲಿ ಜನರಿಗೆ ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಮನವರಿಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಕಳೆದ 10 ವರ್ಷಗಳಲ್ಲಿ ಪ್ರಣಾಳಿಕೆಯ ಪ್ರತಿಯೊಂದು ಅಂಶವನ್ನು ಜಾರಿಗೆ ತಂದಿದ್ದೇವೆ. ಕೌಶಲ್ಯಭಿವೃದ್ಧಿ, ಸ್ಟಾರ್ಟ್9ಅಪ್ ಸೇರಿ ಇನ್ನಿತರೆ ಯೋಜನೆ ಮೂಲಕ ಕೇಂದ್ರ ಸರ್ಕಾರವು ಸ್ವಯಂ ಉದ್ಯೋಗಕ್ಕೆ ಒತ್ತು ನೀಡಿದೆ. ಅದರಂತೆ ರಸ್ತೆ, ಹೆದ್ದಾರಿ, ರೈಲ್ವೆ, ಸೇತುವೆ ನಿರ್ಮಾಣದಿಂದ ದೇಶದ ಅಭಿವೃದ್ಧಿಯತ್ತ ಹೆಜ್ಜೆ ಇಡಲಾಗಿದೆ. ಸ್ವಾತಂತ್ರ್ಯ ಭಾರತದಿಂದ 2014ರವರೆಗೆ ನಿರ್ಮಿಸಿದ್ದಕ್ಕಿಂತ ದುಪ್ಪಟ್ಟು ಹೆದ್ದಾರಿಗಳನ್ನು ಕೇವಲ 10 ವರ್ಷಗಳಲ್ಲೇ ನಿರ್ಮಿಸಲಾಗಿದೆ. ಆದ್ದರಿಂದ ಅಭಿವೃದ್ಧಿಗಾಗಿ ಬಿಜೆಪಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಆನಂದ ಅಗಡಿ, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ, ಜೆಡಿಎಸ್ ಜಿಲ್ಲಾಧ್ಯಕ್ಷ ಸುರೇಶ ಭೂಮರೆಡ್ಡಿ, ಪ್ರಮುಖರಾದ ಚಂದ್ರು ಕವಲೂರು, ಮುರ್ತೆಪ್ಪ ಹಿಚ್ಯಾಳ, ವಿರುಪಾಕ್ಷ ಬಾರಕೇರ, ಶರಣಪ್ಪ ನಾಯಕ, ಜಯಶ್ರೀ ಗೊಂಡಬಾಳ, ವಿದ್ಯಾ ಹೆಸರೂರು, ವಿರೂಪಾಕ್ಷಪ್ಪ ಕಟಿಗಿ, ಬಸಮ್ಮ ದಿವಟರ, ಮೆಹಬೂಬ್ ಬಿಲ್ಲೆ, ರಾಜು ಬಾಕಳೆ, ಕೆ.ಜಿ.ಕುಲಕರ್ಣಿ, ಭೂಸನೂರಮಠ, ಸದಾಶಿವಯ್ಯ ಹಿರೇಮಠ ಹಾಗೂ ಉಭಯ ಪಕ್ಷದ ಪ್ರಮುಖರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಜೀವನ ಮನುಕುಲಕ್ಕೆ ಪ್ರೇರಣೆ– ಡಾ.ಬಸವರಾಜ



ಕೊಪ್ಪಳ: ಭಾರತಕ್ಕೆ ಸಂವಿಧಾನ ಕೊಟ್ಟ ಅಂಬೇಡ್ಕರ್ ಅವರ ಜೀವನ ಇಡೀ ಮನಕುಲಕ್ಕೆ ಪ್ರೇರಣೆ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಹೇಳಿದರು.

ನ ಗ ರ ದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತೋತ್ಸವದಲ್ಲಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ದೇಶಕಂಡ ಮಾದರಿ, ಆದರ್ಶ ಪುರುಷರಾಗಿದ್ದಾರೆ. ಇಂತಹ ನಾಯಕರು ದೇಶದಲ್ಲಿ ಮತ್ತೆ ಹುಟ್ಟಿ ಬರಬೇಕು. ಅವರು ಬರೆದ ಸಂವಿಧಾನ ಅಡಿಯಲ್ಲಿ ನಾವೆಲ್ಲರೂ ಇಂದು ಉತ್ತಮವಾದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವುದು ಹೆಮ್ಮೆಯ ವಿಷಯ ಎಂದರು.

ಅಂಬೇಡ್ಕರ ನಮ್ಮನ್ನು ಅಗಲಿ 6 ದಶಕಗಳೇ ಕಳೆದಿದೆ. ನಾವೆಲ್ಲರೂ ಅವರು ನೀಡಿದ ಸಂವಿಧಾನದ ಮಾರ್ಗದಲ್ಲಿ ಸಾಗುತ್ತಿದ್ದೇವೆ. ಅಂಬೇಡ್ಕರ ಆದರ್ಶವನ್ನು ಎಲ್ಲರು ಅನುಸರಿಸಿಕೊಳ್ಳಬೇಕು ಎಂದರು.

ಜೆಡಿಎಸ್ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ, ಜೆಡಿಎಸ್ ಜಿಲ್ಲಾಧ್ಯಕ್ಷ ಸುರೇಶ ಭೂಮರೆಡ್ಡಿ, ಬಿಜೆಪಿ ಮುಖಂಡರಾದ ಗಣೇಶ ಹಾಗೂ ಇನ್ನಿತರರು ಜೊತೆಗಿದ್ದರು.

# ಸಿ.ವಿ.ಚಂದ್ರಶೇಖರ್ ನೇತೃತ್ವದಲ್ಲಿ ವೆಂಕಟೇಶ ಹಾಲವರ್ತಿ ಬಿಜೆಪಿಗೆ ಸೇರ್ಪಡೆ



ಕೊಪ್ಪಳ: ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್ ಅವರ ನೇತೃತ್ವದಲ್ಲಿ ಮಾಜಿ ತಾಲೂಕು ಪಂಚಾಯತ ಅಧ್ಯಕ್ಷರು ಹಾಗೂ ಮಾದಿಗ ಸಮುದಾಯದ ಪ್ರಭಾವಿ ನಾಯಕ ವೆಂಕಟೇಶ ಹಾಲವರ್ತಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದರು.

ಈ ವೇಳೆ ಮಾತನಾಡಿದ ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಬಸವರಾಜ ಕ್ಯಾವಟರ್, ಬಿಜೆಪಿಯ ತತ್ತ್ವ, ಸಿದ್ಧಾಂತ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ನಾಯಕತ್ವ ಒಪ್ಪಿ ವಿಪಕ್ಷಗಳ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಬಿಜೆಪಿಗೆ ಬರುತ್ತಿದ್ದಾರೆ. ಅವರಿಗೆ ಬಿಜೆಪಿಯಿಂದ ಸ್ವಾಗತ. ಬಿಜೆಪಿ ಸಾಧನೆ ತಿಳಿಸಿ ಮತದಾರಿಗೆ ಮನವರಿಕೆ ಮಾಡಬೇಕು. ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಪ್ರಧಾನಮಂತ್ರಿ ಮಾಡಬೇಕು ಎಂದರು.

ಪಕ್ಷ ಬಂದಿರುವ ವೆಂಕಟೇಶ್ ಅವರ ಅನುಭವ, ನಾಯಕತ್ವ ನಮಗೆ ಮಾರ್ಗದರ್ಶನ ನೀಡಲಿದೆ. ನರೇಂದ್ರ ಮೋದಿ ಜೀ ಅವರನ್ನು ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂಬ ಅವರ ಆಶಯಕ್ಕೆ ಧನ್ಯವಾದಗಳು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ ಹೆಸರೂರು ಹಾಗೂ ಇನ್ನಿತರರು ಜೊತೆಗಿದ್ದರು.

# ಯತ್ನಟ್ಟಿ ಶ್ರೀ ಬಸವರಾಜೇಶ್ವರ ಸ್ವಾಮಿಗಳ ರಥೋತ್ಸವ



ಕೊಪ್ಪಳ : ಪಕ್ಕದ ಯತ್ನಟ್ಟಿ ಗ್ರಾಮದಲ್ಲಿ ದಿನಾಂಕ , 13–04–2024 ಅದಿತ್ಯವಾರದಂದು ಶ್ರೀ.ಮ.ನ.ಪ್ರ.ಸ್ವ. ಶ್ರೀ ಬಸವರಾಜೇಶ್ವರ ಸ್ವಾಮಿಗಳ ಜಾತ್ರಾ ಮುಹೋತ್ಸವ ಮತ್ತು ಧರ್ಮಸಭೆಯ ಸಾನದ್ಯವನ್ನು ಡಾ. ಶ್ರೀ . ಹಿರಿಶಾಂತವೀರಸ್ವಾಮಿಗಳು ಗವಿಸಿದ್ದೇಶ್ವರ ಮಠ ಹೂವ್ವಿನಹಡಗಲಿಯುವರು ವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಮರುಳಾರಾಧ್ಯ ಶಿವಾರ್ಯ ಸ್ವಾಮಿಗಳು ಸಿದ್ದೇಶ್ವರಮಠ ಅಳವಂಡಿಯವರು ಭಕ್ತರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಬಸವರಜೇಶ್ವರಸ್ವಾಮಿಗಳ ಮಠದ ಮಹತ್ವದ ಬಗ್ಗೆ ಆಶೀರ್ವಾದ ವಚನ ನೀಡಿದರು.

ಶ್ರೀ ಬಸವರಾಜೇಶ್ವರ ಸ್ವಾಮಿಗಳ ಪರಮ ಭಕ್ತರಾದ ಡಾ. ಷಣ್ಮುಖಯ್ಯ ತೋಟದ ಸಾಹಿತಿ. ಕಿರುತೆರೆ ಕಲಾವಿದ, ವಕೀಲರು ಸಭೆಯನ್ನು ಉದ್ದೇಶಿಸಿ ಮಾತಾಡುತ್ತ ಸ್ವಾಮಿಗಳ ತಪಸ್ಸು ಮತ್ತು ಕಲಿಯುಗದ ದೇವರ ಪವಾಡಗಳನ್ನು ಮಹಿಮೆಯನ್ನು ಭಕ್ತರಿಗೆ ತಿಳಿಸಿ ಧಾರ್ಮಿಕ ಸಮಾರಂಬದ ಜೊತೆಗೆ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವುದರ ಮುಖಾಂತಾರ ಸಮಾಜ ತಿದ್ದಬಹುದಂದು ಹೇಳಿದರು ವೇದಿಕೆಯಲ್ಲಿ ಮೈನಹಳ್ಳಿ ಗ್ರಾಮದ ಶ್ರೀ ಪತ್ರಪ್ಪ ಮೂಲಿಮನಿ. ಶ್ರೀ ಎಲ್.ಎಫ್.ಪೋ, ಪಾಟೀಲ, ಈಶಪ್ಪ ಮಾಸ್ತರ ಓಜಿನಹಳ್ಳಿಯವರಿದ್ದರು. ಕಾರ್ಯಕ್ರಮದ ನಿರೂಪಣೆ ಶ್ರೀ ಸಿದ್ದಣ್ಣನವರು ಮಾಡಿದರು

ಕಾರ್ಯಕ್ರಮದ ನಂತರ ಶ್ರೀ ಶ್ರೀ ಬಸವರಾಜೇಶ್ವರ ಸ್ವಾಮಿಗಳ ರಥೋತ್ಸವ ವಿಜ್ರಮಣೆಯಿಂದ ಜರುಗಿತು. ಮತ್ತು ಸುತ್ತ ಮುತ್ತಲಿನ ಮೈನಹಳ್ಳಿ. ಓಜನಹಳ್ಳಿ ಕಾಮನೂರು ಗ್ರಾಮದ ಸಾವಿರಾರು ಭಕ್ತರು ಭಾಗವಹಿಸಿದ್ದರು . ಮಠಕ್ಕೆ ಬಂದ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು ಜೊತೆಗೆ ಟ್ರಸ್ಟ ಕಮೀಟಿಯವರು ಎಲ್ಲಾ ವ್ಯವಸ್ಥೆ ಮಾಡಿದ್ದರು.ಕಾರ್ಯಕ್ರಮದ ನಂತರ ಶ್ರೀ ಶ್ರೀ ಬಸವರಾಜೇಶ್ವರ ಸ್ವಾಮಿಗಳ ರಥೋತ್ಸವ ವಿಜ್ರಮಣೆಯಿಂದ ಜರುಗಿತು. ಮತ್ತು ಸುತ್ತ ಮುತ್ತಲಿನ ಮೈನಹಳ್ಳಿ. ಓಜನಹಳ್ಳಿ ಕಾಮನೂರು ಗ್ರಾಮದ ಸಾವಿರಾರು ಭಕ್ತರು ಭಾಗವಹಿಸಿದ್ದರು . ಮಠಕ್ಕೆ ಬಂದ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು ಜೊತೆಗೆ ಟ್ರಸ್ಟ ಕಮೀಟಿಯವರು ಎಲ್ಲಾ ವ್ಯವಸ್ಥೆ ಮಾಡಿದ್ದರು.

# ಮಾಧ್ಯಮ ಮತ್ತು ಭ್ರಷ್ಟಾಚಾರ ಹೊಸ ವಿಷಯವೇನಲ್ಲ

ರಾಮದುರ್ಗದ ಪತ್ರಕರ್ತರಾದ ಸೋಮಶೇಖರ್ ಸೊಗಲದ ಅವರು ತಮ್ಮ ಮೌಲ್ಯಸಂಪದ ಪತ್ರಿಕೆಯಲ್ಲಿ ಬೆಂಗಳೂರು ಪತ್ರಕರ್ತರ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಒಂದು ಲೇಖನ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಸಾಕಷ್ಟು ವಿವರವಾದ ಮಾಹಿತಿಗಳಿಂದ ಕೂಡಿದೆ. ಎಲ್ಲ ಸತ್ಯ ಎಂದಾಗಲೀ ಎಲ್ಲ ಸುಳ್ಳು ಎಂದಾಗಲೀ ನಾನು ಹೇಳುವುದಿಲ್ಲ. ನಾಡಿನ ಪತ್ರಿಕಾ ವಲಯದಲ್ಲಿರುವವರಿಗೆ ಅವೆಲ್ಲ ಗೊತ್ತಿರುವ ಸಂಗತಿಗಳೇ. ಅದು ಬೆಂಗಳೂರಿಗಷ್ಟೇ ಸೀಮಿತವಲ್ಲ. ಬೆಳಗಾವಿ ಸಹಿತ ಎಲ್ಲ ಕಡೆ ಇರುವಂತಹದು.

ಪತ್ರಕರ್ತರಿಂದು ಬಹುತೇಕ ರಾಜಕೀಯ ಕೃಪಾಪೋಷಿತರೇ. ರಾಜಕಾರಣಿಗಳಿಗೆ ಮಾಧ್ಯಮದವರು ಬೇಕು. ಮಾಧ್ಯಮದವರಿಗೆ ರಾಜಕಾರಣಿಗಳು ಬೇಕು. ಪರಸ್ಪರ ಸಹಾಯ ಸಹಕಾರ ಇವರಲ್ಲಿ ಇದ್ದೇಇದೆ. ಪತ್ರಿಕಾರಂಗದಲ್ಲೂ ಧ್ಯೇಯನಿಷ್ಠೆ, ಪ್ರಾಮಾಣಿಕತೆ ಎಂಬೆಲ್ಲ ಶಬ್ದಗಳು ಈಚೆಗೆ ಅಪರಿಚಿತವಾಗತೊಡಗಿವೆ. ಹಿಂದೆ ಒಂದು ಕಾಲದಲ್ಲಿ ಇತ್ತು. ಅಂದಿನ ಆ ಆದರ್ಶಗಳೆಲ್ಲ ಈಗ ವ್ಯಾವಹಾರಿಕವೆನಿಸುವುದಿಲ್ಲ. ಬದುಕಬೇಕಿದ್ದರೆ ಎಲ್ಲವನ್ನೂ ಕಲಿಯಬೇಕು. ರಾಜಕೀಯ ಪಕ್ಷಗಳು, ನಾಯಕರು ರಾಜಕಾರಣದಲ್ಲಿ ಬೆಳೆಯಲು ಪ್ರಚಾರವಂತೂ ಬೇಕೇ ಬೇಕು. ಸಂಗಡ ಅವರ ಭ್ರಷ್ಟಾಚಾರ, ಅವ್ಯವಹಾರಗಳಿಗೆಲ್ಲ ರಕ್ಷಣೆ ಬೇಕು. ಆದ್ದರಿಂದ ಸಿಎಂ ಇರಲಿ, ಮಂತ್ರಿಗಳೇ ಇರಲಿ , ಎಲ್ಲರಿಗೂ ಮಾಧ್ಯಮದವರನ್ನು ಚೆನ್ನಾಗಿ ನೋಡಿಕೊಳ್ಳುವುದು ಅನಿವಾರ್ಯವಾಗಿದೆ. ರಾಜಕೀಯ ನಾಯಕರೆಲ್ಲ ಹೆಚ್ಚಾಗಿ ತಮ್ಮ ತಮ್ಮದೇ ಆದ ಪತ್ರಕರ್ತರನ್ನು ಸಾಕಿಕೊಂಡು , ಅವರಿಗೆ ಬೇಕುಬೇಕಾದ ಸೌಕರ್ಯಗಳನ್ನು ಸಹಾಯಗಳನ್ನು ಒದಗಿಸುವುದೇನೂ ಬಹಳ ದೊಡ್ಡ ರಹಸ್ಯವಾಗಿ ಉಳಿದಿಲ್ಲ. ಹಿಂದಿನ ಎಲ್ಲ ಸರಕಾರಗಳೂ ಆ ಕೆಲಸ ಮಾಡಿವೆ. ಈಗಿನದೂ ಮಾಡುತ್ತಿದೆ. ಅದರಲ್ಲಿ ಹೊಸದೇನೂ ಇಲ್ಲ. ಅಂತಹ ಮಾಧ್ಯಮವೀರರ ದೊಡ್ಡ ಪಡೆಯೇ ಇದೆ ಬೆಂಗಳೂರಿನಲ್ಲಿ. ಇಡೀದಿನ ಒಂದೆಡೆ ಕುಳಿತು ಪತ್ರಕರ್ತರಿಗಾಗಿಯೇ ಇರುವ ಕರರಹಿತ ಬೀರು/ ವ್ಹಿಸ್ಕಿ ಕುಡಿಯುತ್ತ, ಇಸ್ಪೀಟ ಆಡುತ್ತ, ಆಗಾಗ ವಿಧಾನಸೌಧಕ್ಕೋ, ಶಾಸಕರ ಭವನಕ್ಕೋ ಭೆಟ್ಟಿ ನೀಡುತ್ತ ಬರಬೇಕಾದ್ದನ್ನು ವಸೂಲಿ ಮಾಡಿ ಹಾಯಾಗಿರುವ ಹಲವರನ್ನು ನಾನೂ ನೋಡಿದ್ದೇನೆ, ಉಳಿದವರಿಗೂ ಗೊತ್ತು. ಅದೆಲ್ಲ ಯಾವ ವಿಶೇಷವೂ ಅಲ್ಲ. ಬಾಯಲ್ಲಿ ಬೇಕಾದಷ್ಟು ಸಂಭಾವಿತತನದ ಮಾತಾಡುವ ನಾಯಕರೂ, ಮಾಧ್ಯಮದವರೂ ಒಳ ಒಪ್ಪಂದದ ಮೂಲಕ ವ್ಯವಹರಿಸುವುದುಂಟು. ದೊಡ್ಡ ಪತ್ರಿಕೆಯವರ ವರದಿಗಾರರ ಹಫ್ತಾ ವಸೂಲಿ ಜಿಲ್ಲಾ ತಾಲೂಕಾ ಮಟ್ಟಗಳಲ್ಲೂ ಇದೆ. ಎಲ್ಲೋ ಒಬ್ಬಿಬ್ಬರು ಪ್ರಾಮಾಣಿಕರೂ ಸಿಗುತ್ತಾರೆ , ಇಲ್ಲವೆಂದಲ್ಲ. ಮಂತ್ರಿ ಶಾಸಕರೊಡನೆ ಸಲಿಗೆ ಬೆಳೆಸಿಕೊಂಡು , ಅವರ ಹೆಗಲ ಮೇಲೆ ಕೈ ಹಾಕಿ ಏಕವಚನದಲ್ಲಿ ಮಾತಾಡುತ್ತಲೇ ಕೋಟಿಗಟ್ಟಲೆ ಸಂಪಾದಿಸಿದ ಪತ್ರಕರ್ತರು ಬೆಂಗಳೂರಲ್ಲಷ್ಟೇ ಏಕೆ, ನಮ್ಮ ಬೆಳಗಾವಿಯಲ್ಲೂ ಸಿಗುತ್ತಾರೆ. ಅಲ್ಲಲ್ಲಿ ಆಸ್ತಿಪಾಸ್ತಿ ಮಾಡಿದವರು, ಎರಡೆರಡು ಬಂಗಲೆ ಕಟ್ಟಿಸಿಕೊಂಡು ಐಷಾರಾಮಿ ಜೀವನ ನಡೆಸುವವರೂ ಇದ್ದಾರೆ.

ಕಾಲಕ್ಕೆ ತಕ್ಕ ಹಾಗೆ ಎಲ್ಲ ನಡೆಯುವಂತಹವೆ.

ರಾಜಕೀಯ ರಂಗದ ಭ್ರಷ್ಟಾಚಾರ ಈಗ ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಳ್ಳುತ್ತಿರುವಾಗ ಬಡ ಮಾಧ್ಯಮದವರು ಮಾತ್ರ ಹರಕು ಅಂಗಿ ಹಾಕಿಕೊಂಡು ಓಡಾಡಬೇಕೆನ್ನುವುದು ಯಾವ ನ್ಯಾಯ? ಮಾಧ್ಯಮ ಬೆಳೆದಿದೆ. ಪತ್ರಕರ್ತರೂ ಬೆಳೆಯಬೇಕೆನ್ನುವುದು ಸಹಜ. ಯಾವ ರೀತಿಯಲ್ಲಿ ಬೆಳೆಯಬೇಕು ಎನ್ನುವುದು ಅವರವರಿಗೆ ಬಿಟ್ಟ ವಿಷಯ. ನೈತಿಕ ಮೌಲ್ಯಗಳು ಹಿಂದೆ ಸರಿದು ಬಹಳ ಕಾಲ ಆಗಿದೆ. ಎಲ್ಲವೂ ಬದಲಾದಾಗ ಮಾಧ್ಯಮದವರೂ ಬದಲಾಗುತ್ತಾರೆ. ಐವತ್ತು ವರ್ಷದ ಹಿಂದಿನ ಹಾಗೇ ಬದುಕಿ ಎಂದರೆ ಈಗ ಬದುಕಲು ಆಗುತ್ತದೆಯೇ? ರಾಜಕಾರಣಿಗಳು ತಾವು ಭ್ರಷ್ಟರಾಗುವುದರೊಂದಿಗೆ ಅಧಿಕಾರಿಗಳನ್ನೂ ಮಾಧ್ಯಮದವರನ್ನೂ ಭ್ರಷ್ಟರನ್ನಾಗಿ ಮಾಡಿದ್ದಾರೆ. ಹಲವರು ಹೊಂದಾಣಿಕೆ ಮಾಡಿಕೊಂಡು ಹೋಗುತ್ತಾರೆ. ಮಾಡಿಕೊಳ್ಳದವರ ಕಷ್ಟಕ್ಕೆ ಅವರೇ ಜವಾಬ್ದಾರಿ. ಹುಚ್ಚುಂ...ಮದ್ವೇಲಿ ಉಂಡವನೇ ಜಾಣ!

– ಎಲ್. ಎಸ್. ಶಾಸ್ತ್ರಿ